# ಮನೆ ಬಿಟ್ಟು ಲಾಕ್‌ಡೌನ್ ಅನುಭವಿಸಿದ ನೋವಿನ ಕಥೆ

ಲಾವಣ್ಯ ಎಸ್.
ಸ್ಟಾರ್ ಸುವರ್ಣದ
'ಸಂಘರ್ಷ'ದ ಅನಘಾ



◆ **ಲಾಕ್ ಡೌನ್ ಸಂದರ್ಭ ಮತ್ತು ಆ ನಂತರದ ದಿನಗಳು ಹೇಗಿದ್ದವು?**

ಮಾರ್ಚ್‌ನಲ್ಲಿ 'ಸಂಘರ್ಷ' ಚಿತ್ರೀಕರಣ ಆರಂಭವಾಗಿತ್ತು. ಆ ದಿನಗಳಲ್ಲಿ ಲಾಕ್‌ಡೌನ್ ಪ್ರಕಟಣೆಯಾಯಿತು. ಸಿಕ್ಕಾಪಟ್ಟೆ ಸೀರಿಯಲ್ ನಿಂತುಹೋದವು. ಭಯ ಸಹಜವಾಗಿ ಕಾಡ್ತಾ ಇತ್ತು. 'ಸಂಘರ್ಷ' ಪ್ರಸಾರ ದಿನ ಮುಂದಕ್ಕೆ ಹಾಕಿದರು. ಇದೆಲ್ಲ ಆಗುವ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿ ಇರಲಿಲ್ಲ. ಶಿರಸಿಯ ನನ್ನ ಸ್ನೇಹಿತರ ಮನೆಗೆ ಹೋಗಿದ್ದೆ. ದಿಡೀರ್ ಎಂದು ಲಾಕ್‌ಡೌನ್ ಮಾಡಿದ್ದರಿಂದ ತುಂಬಾ ತೊಂದರೆ ಆಯ್ತು. ಅಲ್ಲಿಂದ ಬೆಂಗಳೂರಿಗೆ ಬರುವುದು ತುಂಬ ಕಷ್ಟ ಇತ್ತು. ತಾಲ್ಲೂಕು ಕಚೇರಿಗೆ ಹೋಗಿ ಮನವಿ ಮೇಲೆ ಮನವಿ ಮಾಡುತ್ತಿದ್ದೆ. ಮನೆಯವರಿಂದ ದೂರವಾಗಿ ಅಪರಿಚಿತ ಪ್ರದೇಶದಲ್ಲಿ 45 ದಿನ ಇದ್ದೆ. ಯಾವಾಗ ಬೆಂಗಳೂರಿಗೆ ಬಂದು ಸೇರುತ್ತೇನೋ ಎಂದೇ ಚಿಂತಿಸುತ್ತಿದ್ದೆ. ಚಿತ್ರೀಕರಣವೂ ನಿಂತಿದ್ದರಿಂದ ಕೆಲಸ ಇರಲಿಲ್ಲ. ಆದರೆ ಅಪ್ಪ– ಅಮ್ಮನ ಸಾಂಗತ್ಯಕ್ಕೆ ಹಾತೊರೆಯುತ್ತಿದ್ದೆ. ಆ ದಿನಗಳಲ್ಲಿ ಪಟ್ಟ ವೇದನೆ ಅಷ್ಟಿಷ್ಟಲ್ಲ. ಲಾಕ್‌ಡೌನ್ ಅವಧಿಯಲ್ಲಿ ನನ್ನ ಸ್ನೇಹಿತರು ಬೆಂಗಳೂರಿನಲ್ಲಿ ಆಹಾರ ಪದಾರ್ಥವನ್ನು ಹಂಚುತ್ತಿದ್ದರು. ಅವರಂತೆ ನಾನೂ ನಾಲ್ಕು ಮಂದಿಗೆ ಊಟ ಕೊಡಬಹುದಿತ್ತು. ಅದನ್ನೂ ಕಳೆದುಕೊಂಡೆ ಎನ್ನುವ ವೇದನೆ ಕಾಡ್ತಾನೇ ಇತ್ತು. ಹುಟ್ಟಿದ ಹಬ್ಬದ ದಿನ ಕಿದ್ವಾಯಿ ಆಸ್ಪತ್ರೆಗೆ ಊಟ ನೀಡುತ್ತಿದ್ದೆ. ಈ ವರ್ಷ ಅದೂ ತಪ್ಪಿತು. ನಟನೆಗೆ ಅವಕಾಶಗಳೇ ವಿರಳವಾಗಿವೆ. ತುಂಬ ಧಾರಾವಾಹಿಗಳು ನಿಂತಿವೆ. ಸಾಕಷ್ಟು ಕಲಾವಿದರಿಗೆ ಕೆಲಸ ಇಲ್ಲದಂತೆ ಆಗಿದೆ. ನನಗೂ ಆ ಭಯ ಇತ್ತು.

◆ **ನಿಮ್ಮ ಪಾತ್ರ ಎಲ್ಲೋ ಮರೆಯಾಗುತ್ತೆ ಅಂದು ಅನ್ನಿಸುತ್ತಾ?**

'ಸಂಘರ್ಷ'ದ ಪಾತ್ರ ನನ್ನ ಮೊದಲ ನಾಲ್ಕು ಧಾರಾವಾಹಿಗಳಿಗಿಂತ ಭಿನ್ನ ಇದೆ. ಎಲ್ಲದರಲ್ಲೂ ತಂಗಿ ಪಾತ್ರವನ್ನೇ ಮಾಡಿದ್ದೇನೆ. ಇಲ್ಲಿಯೂ ಅದೇ ಆಗಿದ್ದರೂ ಕಥೆಯಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ. ಇದು ನಿಜಕ್ಕೂ ಖುಷಿಯನ್ನು ನೀಡಿದೆ. ಪಾತ್ರ ಬೆಳೆಯುತ್ತಿದೆ. ಅದರಂತೆ ಅಭಿನಯಿಸುವ ಅಗತ್ಯವೂ ವೃದ್ಧಿಯಾಗುತ್ತಿದೆ. ನನಗೆ ನಟನೆಯನ್ನು ಕಲಿಯಲು ಆವಿಷ್ಕರಿಸಲು ಈ ಪಾತ್ರ ಸಾಕಷ್ಟು ಅವಕಾಶ ನೀಡಿದೆ.

◆ **ಮುಂದಿನ ಪಾತ್ರಗಳ ನಿರೀಕ್ಷೆ ಹೇಗಿದೆ?**

ಆಕಸ್ಮಿಕವಾಗಿ ನಟನೆಗೆ ಬಂದೆ. 'ರಾಧಾ ರಮಣ' ಆಡಿಷನ್ ನೀಡಿ ಎರಡು ತಿಂಗಳ ನಂತರ ಅವಕಾಶ ಸಿಕ್ಕಿತ್ತು. ನನ್ನ ಅಮ್ಮನಿಗೆ ನಂಬಿಕೆಯೇ ಇರಲಿಲ್ಲ. ಅವರನ್ನು ಚಿತ್ರೀಕರಣಕ್ಕೆ ಕರೆದುಕೊಂಡು ಹೋದ ನಂತರ ಅಚ್ಚರಿಪಟ್ಟರು. ಇಲ್ಲಿಯವರೆಗೆ ಒಳ್ಳೆಯ ಅನುಭವವನ್ನು ಈ ರಂಗ ಕಲಿಸಿದೆ. ಮುಂದೆ ಕೂಡ ಇಲ್ಲೇ ಬೆಳೆಯಬೇಕು ಎನ್ನುವ ಆಸೆ ಇದೆ. ಮುಂದಿನ ದಿನಗಳಲ್ಲಿ ನನ್ನಿಂದ ಏನು ಸಾಧ್ಯ ಇಲ್ಲ ಎಂದು ಅಂದುಕೊಳ್ಳುತ್ತೇನೋ ಅಂತಹ ಪಾತ್ರಗಳನ್ನೇ ಮಾಡಬೇಕು ಎನ್ನುವ ಆಸೆ ಇದೆ. ಸಿನಿಮಾ ಆಗಲಿ, ಸೀರಿಯಲ್ ಆದರೂ ಸರಿ. ಸವಾಲಿನ ಪಾತ್ರ ಆಗಬೇಕು. ನಾಯಕಿಯಾಗಿ ಸದ್ಗುಣಗಳ ಮೂರ್ತಿಯಂತೆ ಇರಬೇಕು ಎಂದು ಬಯಸುವುದಿಲ್ಲ. ತುಂಬ ಕ್ರಿಯಾಶೀಲವಾದ ಅವಕಾಶವನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸಿದ್ದೇನೆ. ಸಿನಿಮಾಕ್ಕೆ ಅವಕಾಶ ಬಂದಿದ್ದರೂ ಅದನ್ನು ಮುಂದುವರಿಸಿಲ್ಲ.

◆ **ನಿಮ್ಮ ಪರಿಚಯವನ್ನು ಹೇಳುವುದಾದರೆ...**

ಅಪ್ಪ ಸೀತಾರಾಮ ಶಾಸ್ತ್ರಿ, ಅಮ್ಮ ಮಾಧವಿ, ಹುಟ್ಟಿ ಬೆಳೆದಿದ್ದು ಬೆಂಗಳೂರು. ಬಿಕಾಂ ಓದಿದ್ದೇನೆ. ಅಂತಿಮ ವರ್ಷ ಓದುವಾಗಲೇ ನಟನೆಗೆ ಬಂದೆ. ಮೊದಲಿನಿಂದಲೂ ನೃತ್ಯ ಪ್ರದರ್ಶನ ನೀಡುತ್ತಿದ್ದೆ. ಅದೇ ನನ್ನನ್ನು ನಟನೆಯತ್ತ ನೋಡುವ ಅವಕಾಶವನ್ನು ನೀಡಿತು. ಮೊದಲ ಧಾರಾವಾಹಿ ಮುಗಿದ ಬಳಿಕ ಕಾರ್ಪೋರೆಟ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದೆ. ಸ್ವಲ್ಪ ದಿನದಲ್ಲಿ 'ರಾಜಾರಾಣಿ'ಗೆ ಅವಕಾಶ ಬಂತು. ಉದ್ಯೋಗ ಮತ್ತು ಅಭಿನಯದಲ್ಲಿ ತುಂಬ ವ್ಯತ್ಯಾಸ ಇದೆ. ಬೆಳಿಗ್ಗೆ ಕೆಲಸಕ್ಕೆ ಲಾಗಿನ್ ಆದರೆ ಕೆಲಸ ಮುಗಿಯುವ ತನಕ ಅದೇ ಕೆಲಸ. ನಟನೆಯಿಂದ ಉದ್ಯೋಗ ಅರಸಿ ಹೋದಾಗ ತಪ್ಪು ಮಾಡುತ್ತಿದ್ದೇನಾ ಎಂದು ಯೋಚಿಸಿದ್ದೇನೆ. ಅದೃಷ್ಟವಶಾತ್ ಕೂಡಲೇ ಮತ್ತೊಂದು ಧಾರಾವಾಹಿಗೆ ಅವಕಾಶ ಸಿಕ್ಕಿತು. ಆಗಲೂ ತುಂಬ ಯೋಚನೆ ಮಾಡಿ ಬಣ್ಣವನ್ನೇ ಒಪ್ಪಿಕೊಂಡೆ. ಏಕೆಂದರೆ, ಇಲ್ಲಿ ಹೊಸ ಜನ ಪರಿಚಯ ಆಗುತ್ತಾರೆ. ನಮ್ಮ ಪ್ರತಿಭೆಯನ್ನು ತೋರಿಸಲು ಉತ್ತಮ ವೇದಿಕೆ ಕೂಡ ಸಿಗುತ್ತದೆ. ನಾನು ಯಾರು ಎನ್ನುವುದು ಗೊತ್ತಾಗುತ್ತದೆ. ಯಾವುದೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಇದನ್ನು ಅನುಭವಿಸಲು ಆಗುವುದಿಲ್ಲ.

■ **ರಾಘವೇಂದ್ರ ಕೆ.**